# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

ಸಂಪುಟ : VII ಸಂಚಿಕೆ : 1 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಏಪ್ರಿಲ್ – ಜೂನ್ 2022


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

2022-23ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿಯಲ್ಲಿ ಸಂಘವು ಠೇವಣಾತಿ ಮತ್ತು ಸಾಲ ವಿಭಾಗದಲ್ಲಿ ಗಣನೀಯ ವೃದ್ಧಿಯನ್ನು ಸಾಧಿಸಿದೆ.

ಈ ತ್ರೈಮಾಸಿಕ ಅವಧಿಯಲ್ಲಿ ನಿವ್ವಳ ಲಾಭ ಗಳಿಕೆ ಮತ್ತು ಸಾಲ ವಸೂಲಾತಿಯಲ್ಲಿ ಇನ್ನೂ ಹೆಚ್ಚಿನ ಪ್ರಯತ್ನಗಳು ಬೇಕಿತ್ತು. ಮುಂಬರುವ ಅವಧಿಯಲ್ಲಿ ಈ ಬಗ್ಗೆ ಗಮನಿಸಿಕೊಂಡು ಸಂಘವು ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಎಲ್ಲಾ ಕಾರ್ಯ ವಿಭಾಗದಲ್ಲಿ ಉತ್ತಮ ಪ್ರಗತಿ ದಾಖಲಿಸಬೇಕಾಗಿರುವುದು.

ಸಂಘವು ಈ ತ್ರೈಮಾಸಿಕ ಅವಧಿಯಲ್ಲಿ ಒಟ್ಟು ವ್ಯವಹಾರದಲ್ಲಿ ರೂ.700 ಕೋಟಿಯ ಮೈಲಿಗಲ್ಲನ್ನು ದಾಟಿರುವುದು. ದಿನಾಂಕ 30.06.2022ಕ್ಕೆ ರೂ.392 ಕೋಟಿ ಠೇವಣಿ ಮತ್ತು ರೂ.328 ಕೋಟಿ ಸಾಲದೊಂದಿಗೆ ರೂ.720 ಕೋಟಿ ಮೀರಿದ ವ್ಯವಹಾರವನ್ನು ಸ್ಥಾಪನೆಯ 28ನೇ ವರ್ಷದಲ್ಲಿ ಸಾಧಿಸಿರುವುದು ಮಹತ್ತರ ಸಾಧನೆಯಾಗಿದೆ.

**ಸಂಘವು 30.06.2022ಕ್ಕೆ ಸಾಧಿಸಿದ ಪ್ರಗತಿಯನ್ನು ದಿನಾಂಕ 30.06.2021ಕ್ಕೆ ಹೋಲಿಸಿಕೊಂಡು ಪ್ರಗತಿಯ ಪಕ್ಷಿನೋಟ ಈ ಕೆಳಗಿನಂತಿದೆ.**

| ಕ್ರ. ಸಂ. | ಕಾರ್ಯ ವಿಭಾಗ | ಜೂನ್ 2021ಕ್ಕೆ ಇದ್ದಂತೆ (ರೂ) | ಜೂನ್ 2022ಕ್ಕೆ ಇದ್ದಂತೆ (ರೂ) | ಹೆಚ್ಚಳ (ರೂ) | ಶೇಖಡಾವಾರು ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ₹316 ಕೋಟಿ | ₹392 ಕೋಟಿ | ₹76 ಕೋಟಿ | 24% |
| 2 | ಸಾಲ ಮತ್ತು ಮುಂಗಡ | ₹257 ಕೋಟಿ | ₹328 ಕೋಟಿ | ₹71 ಕೋಟಿ | 28% |
| 3 | ಒಟ್ಟು ವ್ಯವಹಾರ | ₹573 ಕೋಟಿ | ₹720 ಕೋಟಿ | ₹147 ಕೋಟಿ | 26% |
| 4 | ನಿವ್ವಳ ಲಾಭ | ₹1.23 ಕೋಟಿ | ₹1.30 ಕೋಟಿ | ₹7 ಲಕ್ಷ | 6% |
| 5 | ಅನುತ್ಪಾದಕ ಆಸ್ತಿ (Absolute) | ₹14 ಲಕ್ಷ | ₹3.29 ಕೋಟಿ | – | – |
| | ಶೇಕಡಾವಾರು | 0.06% | 1% | – | – |
| 6 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

ದಿನಾಂಕ 03.07.2022ರಂದು ಶಾಖಾಧಿಕಾರಿಗಳ ಸಭೆಯಲ್ಲಿ ಪ್ರಗತಿ ಪರಿಶೀಲನೆಯನ್ನು ನಡೆಸಿ, 2022-23ನೇ ಸಾಲಿನಲ್ಲಿ ಶಾಖಾವಾರು ವ್ಯವಹಾರಿಕ ಗುರಿಗಳನ್ನು ನಿಗದಿಪಡಿಸಲಾಗಿದೆ. ಈ ಸಭೆಯಲ್ಲಿ ನಿಗದಿಪಡಿಸಿರುವ 2022-23ನೇ ಸಾಲಿನ ಗುರಿಗಳ ಹೊರತಾಗಿ ಪ್ರತಿ ಮಾಸಿಕವಾಗಿ ಗುರಿಗಳನ್ನು ನಿಗದಿಪಡಿಸಿಕೊಂಡು ಅದನ್ನು ಸಾಧಿಸಿಕೊಂಡು ಒಂದು, ಪ್ರತಿ ತ್ರೈಮಾಸಿಕ ವರ್ಷಾಂತ್ಯ ಉತ್ತಮ ಪ್ರಗತಿಯನ್ನು ಸಾಧಿಸಿ ನಿಗದಿತ ಎಲ್ಲಾ ಗುರಿಗಳನ್ನು ಸಾಧಿಸುವುದು. ಈ ನಿಟ್ಟಿನಲ್ಲಿ ಹೆಚ್ಚಿನ ಮುತುವರ್ಜಿಯಿಂದ ಕಾರ್ಯಪ್ರವೃತ್ತರಾಗಲು ಶಾಖೆಗಳಿಗೆ ಕರೆ ನೀಡುತ್ತಿದ್ದೇವೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

## ಸಂಘದ ನಿರ್ದೇಶಕರಾದ ಸಹಕಾರ ರತ್ನ ಶ್ರೀ ಸವಣೂರು ಸೀತಾರಾಮ ರೈ ಕೆ. ಯವರ 75ನೇ ಹುಟ್ಟು ಹಬ್ಬದ ಸಂಭ್ರಮಾಚರಣೆಯಲ್ಲಿ ಸಂಘದ ವತಿಯಿಂದ ಸನ್ಮಾನ



ದಿನಾಂಕ 09.06.2022ರಂದು ಸವಣೂರಿನಲ್ಲಿ ಜರಗಿದ ಸಂಘದ ನಿರ್ದೇಶಕರಾದ ಸಹಕಾರ ರತ್ನ ಶ್ರೀ ಸವಣೂರು ಸೀತಾರಾಮ ರೈ ಕೆ. ಯವರ 75ನೇ ಹುಟ್ಟು ಹಬ್ಬದ ಸಂಭ್ರಮಾಚರಣೆ “ಅಮೃತ ರಶ್ಮಿ” ಕಾರ್ಯಕ್ರಮದಲ್ಲಿ ಅವರನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರ ನೇತೃತ್ವದಲ್ಲಿ ಸಂಘದ ವತಿಯಿಂದ ಸನ್ಮಾನಿಸಿ, ಹುಟ್ಟುಹಬ್ಬದ ಶುಭಾಶಯಗಳನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರುಗಳಾದ ಶ್ರೀ ವಿಠಲ ಪಿ. ಶೆಟ್ಟಿ, ಶ್ರೀ ಯಂ. ರಾಮಯ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ರವೀಂದ್ರನಾಥ ಜಿ. ಹೆಗ್ಡೆ, ಶ್ರೀ ಕುಂಬ್ರ ದಯಾಕರ ಆಳ್ವ, ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ ಮತ್ತು ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ. ಹಾಗೂ ಪುತ್ತೂರು ಶಾಖೆಯ ಶಾಖಾಧಿಕಾರಿ ಶ್ರೀ ಚಂದ್ರಹಾಸ್ ಶೆಟ್ಟಿಯವರು ಉಪಸ್ಥಿತರಿದ್ದರು.

## ಶ್ರೀ ಗಾಯತ್ರಿ ಪತ್ತಿನ ಸಹಕಾರ ಸಂಘ ನಿ. ಹಾಸನ ಇದರ ಆಡಳಿತ ಮಂಡಳಿ ಪ್ರತಿನಿಧಿಗಳು ಸಂಘಕ್ಕೆ ಭೇಟಿ





ದಿನಾಂಕ 21.06.2022ರಂದು ಶ್ರೀ ಗಾಯತ್ರಿ ಪತ್ತಿನ ಸಹಕಾರ ಸಂಘ ನಿ. ಹಾಸನ ಇದರ ಆಡಳಿತ ಮಂಡಳಿ ಪ್ರತಿನಿಧಿಗಳು ಸಂಘಕ್ಕೆ ಅಧ್ಯಯನ ಭೇಟಿ ನೀಡಿದಾಗ, ಸಂಘದ ಅಧ್ಯಕ್ಷರು ಹೂಗುಚ್ಛ ನೀಡಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಶ್ರೀ ಗಾಯತ್ರಿ ಪತ್ತಿನ ಸಹಕಾರ ಸಂಘವು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ ಶಾಲು ಹೊದಿಸಿ ಗೌರವಿಸಿದರು.

# ದಿನಾಂಕ 03.07.2022ರಂದು ಜರಗಿದ ಶಾಖಾ ವ್ಯವಸ್ಥಾಪಕರ ಸಭೆ





ದಿನಾಂಕ 03.07.2022ರಂದು ಜರಗಿದ ಶಾಖಾ ವ್ಯವಸ್ಥಾಪಕರ ಪ್ರಗತಿ ಪರಿಶೀಲನಾ ಸಭೆಯನ್ನು ಜರಗಿಸಲಾಯಿತು. ಸಭೆಯನ್ನು ಉದ್ಘಾಟಿಸಿದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ವೈಯಕ್ತಿಕ ಶಾಖೆಗಳ ಪ್ರಗತಿ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ಶಾಖೆಗಳು 2022–23ನೇ ಸಾಲಿನಲ್ಲಿ ಸಾಧಿಸಬೇಕಾದ ಗುರಿಗಳ ಬಗ್ಗೆ ವಿಮರ್ಶಿಸಲಾಯಿತು. ಸಂಘದ ವಿಷನ್ – 2025ರಲ್ಲಿ ತಿಳಿಸಲಾದ ರೂ.1000 ಕೋಟಿ ಒಟ್ಟು ವ್ಯವಹಾರದ ಮೈಲುಗಲ್ಲನ್ನು 2024ರ ಅಂತ್ಯದೊಳಗೆ ಸಂಘವು ಸಾಧಿಸಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ನಿರ್ದೇಶಕರುಗಳಾದ ಶ್ರೀ ಯಂ. ರಾಮಯ ಶೆಟ್ಟಿ ಮತ್ತು ಶ್ರೀ ಬೆಳ್ಳಿಪ್ಪಾಡಿ ಪ್ರಸಾದ್ ಕೌಶಲ್ ಶೆಟ್ಟಿರವರು ಸಭೆಯಲ್ಲಿ ಭಾಗವಹಿಸಿ ಶಾಖಾಧಿಕಾರಿಗಳಿಗೆ ಸೂಕ್ತ ಸಲಹೆಗಳನ್ನು ನೀಡಿದರು. ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ., ಮುಖ್ಯ ವ್ಯವಸ್ಥಾಪಕರಾದ ಶ್ರೀ ಮೋಹನ್‌ದಾಸ್ ಶೆಟ್ಟಿ, 25 ಶಾಖೆಗಳ ಶಾಖಾ ವ್ಯವಸ್ಥಾಪಕರುಗಳು ಮತ್ತು ಶಾಖಾ ಪ್ರತಿನಿಧಿಗಳು ಹಾಗೂ ಕೇಂದ್ರ ಕಛೇರಿ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಕವನ



ರಚನೆ :
**ಧನಂಜಯ್ ಕುಮಾರ್**
ಸುರತ್ಕಲ್ ಶಾಖಾ ಸಿಬ್ಬಂದಿ

ಬಿಟ್ಟು ಬಿಟ್ಟು ಬಾರದಿರು ಮಳೆಯೇ
ಪ್ರೀತಿ ಕೊಟ್ಟು ಕೊರಗದಿರು ಮನವೇ । 2 ।

ಮರುಕಳಿಸುತ್ತಿದೆ ಮಧುರ ನೆನಪುಗಳು
ಮುಂಗಾರಿನ ಮಳೆಹನಿಯ ಜೊತೆಗೆ
ಮತ್ತೆ ಕೇಳುತಿದೆ ಮರೆಯಾದ ಮಾತುಗಳು
ಮಳೆನಿಂತು ಮೂಡಿದ ಮಳೆಬಿಲ್ಲ ಜೊತೆಗೆ । ಬಿಟ್ಟು ಬಿಟ್ಟು ।। 1 ।

ಆಗೊಮ್ಮೆ ಈಗೊಮ್ಮೆ ಗುಡುಗು ಮಿಂಚುಗಳು
ಎದೆಯೊಳಗಿನ ಭಾವನೆ ಕೆರಳುವಂತೆ
ಮತ್ತೊಮ್ಮೆ ಮಗದೊಮ್ಮೆ ಸುಳಿದಿದೆ ಸುಳಿಗಾಳಿ
ದಿಕ್ಕೆಟ್ಟಾ ಬದುಕಿನ ದಾರಿ ತೋರುವಂತೆ । ಬಿಟ್ಟು ಬಿಟ್ಟು ।। 1 ।

ಪ್ರೀತಿಯನು ಹುಡುಕುತ ಪರಿತಪಿಸಿದೆ ಮನವು
ಮಳೆಯಾಗಮನಕ್ಕೆ ಕಾದ ಚಾತಕನಂತೆ
ಸುರಿಯುವ ಮಳೆಯನು ತಡೆಯುವವರಾರು
ಪ್ರೀತಿಗೆ ಬೇಲಿಯನು ಹಾಕುವವರಾರು । ಬಿಟ್ಟು ಬಿಟ್ಟು ।। 1 ।

ಮುಂಗಾರಿನ ಮಳೆಗೆ ಮನಸೋಲದವರಿಲ್ಲಾ
ಮೊದಲನೆ ಪ್ರೀತಿಯ ಮರೆತೋದವರಿಲ್ಲಾ
ಮತ್ತೆ ಮತ್ತೆ ಬರುವುದು ಮಳೆಯು
ಪ್ರೀತಿಯ ನೆನಪಲಿ ಕೊರಗುವುದು ಮನವು । ಬಿಟ್ಟು ಬಿಟ್ಟು ।

ಬಿಟ್ಟು ಬಿಟ್ಟು ಬಾರದಿರು ಮಳೆಯೇ
ಪ್ರೀತಿ ಕೊಟ್ಟು ಕೊರಗದಿರು ಮನವೇ । 2 ।

# ಅಭಿನಂದನೆಗಳು

- ❖ ಸಂಘದ ಮೂಡಬಿದ್ರಿ ಶಾಖೆಯ ಸಿಬ್ಬಂದಿ ಚಿ। ಅಶೋಕ್ ಎಂ.ಕೆ. ರವರ ವಿವಾಹವು ಚಿ।ಸೌ। ದೀಪಿಕರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ-ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.
- ❖ ಸಂಘದ ಉಡುಪಿ ಶಾಖೆಯ ಸಿಬ್ಬಂದಿ ಶ್ರೀ ಮೋಹನ್ ಶೆಟ್ಟಿರವರು ಗಂಡು ಮಗುವಿನ ತಂದೆಯಾಗಿರುತ್ತಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.

# ಹುಟ್ಟು ಹಬ್ಬದ ಶುಭಾಶಯಗಳು

| | | |
|---|---|---|
| ಶ್ರೀಮತಿ ಲಕ್ಷ್ಮೀ ಜೆ. ಶೆಟ್ಟಿ | – | ಉಪಾಧ್ಯಕ್ಷರು |
| ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ | – | ನಿರ್ದೇಶಕರು |
| ಸವಣೂರು ಶ್ರೀ ಕೆ. ಸೀತಾರಾಮ ರೈ | – | ನಿರ್ದೇಶಕರು |

| ಸಿಬ್ಬಂದಿಗಳ ಹೆಸರು ಮತ್ತು ಶಾಖೆ | | ಸಿಬ್ಬಂದಿಗಳ ಹೆಸರು ಮತ್ತು ಶಾಖೆ | |
|---|---|---|---|
| ಶ್ರೀ ತಿಮ್ಮಯ್ಯ ಶೆಟ್ಟಿ | ಮುಡಿಪು | ಶ್ರೀ ಅಶೋಕ್ ಎಂ. ಕೆ. | ಮೂಡಬಿದ್ರಿ |
| ಶ್ರೀ ಚಂದ್ರಹಾಸ್ ಶೆಟ್ಟಿ | ಪುತ್ತೂರು | ಶ್ರೀ ಸುರೇಶ್ ನ್ಯಾಕ್ | ಮೂಡಬಿದ್ರಿ |
| ಶ್ರೀ ದಿನೇಶ್ ಶೆಟ್ಟಿ | ಕಡಬ | ಶ್ರೀಮತಿ ಮಮತಾ ಎಂ. | ತೊಕ್ಕೊಟ್ಟು |
| ಶ್ರೀಮತಿ ವೈಶಾಲಿ | ವಿಟ್ಲ | ಶ್ರೀಮತಿ ಶ್ವೇತಾ | ಕೇಂದ್ರ ಕಛೇರಿ |
| ಶ್ರೀ ದಿನೇಶ್ ರೈ | ಕೇಂದ್ರ ಕಛೇರಿ | ಶ್ರೀ ಮೋಹನ್ ಶೆಟ್ಟಿ | ಉಡುಪಿ |
| ಶ್ರೀ ಸುಧೀರ್ ಕುಮಾರ್ ಡಿ. | ಚಿಲಿಂಬಿ | ಶ್ರೀ ನವೀನ್ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀ ದಿತೇಶ್ ಶೆಟ್ಟಿ | ಹಂಪನಕಟ್ಟೆ | ಶ್ರೀ ಅಮಿತ್ ಕುಮಾರ್ | ತೊಕ್ಕೊಟ್ಟು |
| ಶ್ರೀ ಸುಭ್ರತ್ | ಹೆಬ್ರಿ | ಶ್ರೀಮತಿ ಅರುಣಾ ರೈ | ಚಿಲಿಂಬಿ |
| ಶ್ರೀ ಜಯರಾಮ್ | ಬೈಂದೂರು | ಶ್ರೀ ಸುಜಿತ್ ಎಸ್. | ಕೈಕಂಬ |
| ಶ್ರೀ ಪ್ರವೀಣ್ ರೈ | ಕಡಬ | ಶ್ರೀಮತಿ ಶ್ರೀಲಕ್ಷ್ಮಿ | ಸುರತ್ಕಲ್ |
| ಶ್ರೀ ವಿರಾಜ್ ಜೆ. ಶೆಟ್ಟಿ | ಬ್ರಹ್ಮಾವರ | ಕು. ಸುಶ್ಮಿತಾ | ಉಡುಪಿ |
| ಶ್ರೀಮತಿ ಮಮತಾ ಎಚ್. | ಉಪ್ಪಿನಂಗಡಿ | ಕು. ಸುಮತಿ | ಬಿ.ಸಿ.ರೋಡ್ |

Private Circulation only

**BOOK-POST**

**To,**

If not delivered please return to :
**SRI RAMAKRISHNA CREDIT CO-OP. SOCIETY LTD.**
2nd Floor, Amruthotsava Building, Bunts Hostel Circle, Mangalore - 575 003.